International Journal of Kannada Research 2020; 6(3): 79-81




International Journal of Kannada Research
www.kannadajournal.com

ISSN: 2454–5813
IJKR 2020; 6(3): 79-81
© 2020 IJKR
www.kannadajournal.com
Received: 10-05-2020
Accepted: 12-06-2020

**ಡಾ. ಶೋಭಾ. ಎನ್**
ಸಹಾಯಕ ಪ್ರಾಧ್ಯಾಪಕರು, ಸ. ಪ್ರ. ದ. ಕಾ, ಯಲಹಂಕ. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು

**Corresponding Author:**
**ಡಾ. ಶೋಭಾ. ಎನ್**
ಸಹಾಯಕ ಪ್ರಾಧ್ಯಾಪಕರು, ಸ. ಪ್ರ. ದ. ಕಾ, ಯಲಹಂಕ. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು

# ಮಹಿಳಾ ನಾಟಕ ಸಾಹಿತ್ಯದಲ್ಲಿ ‘ಮಾಧವಿ’ ಪಾತ್ರ ಚಿತ್ರಣ

**ಡಾ. ಶೋಭಾ. ಎನ್**

ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳ ಪ್ರಮುಖ ವಸ್ತು ‘ಪುರಾಣಗಳು’. ಈ ಪುರಾಣದ ವಸ್ತು, ಪಾತ್ರಗಳ ಸಿದ್ಧ ಮಾದರಿಯನ್ನು ಭಂಜಿಸಿ ಆಧುನಿಕ ವಿಚಾರಧಾರೆಯ ನೆಲೆಯಲ್ಲಿ ಪುನರ್ ವ್ಯಾಖ್ಯಾನ ಮಾಡುವುದರ ಮೂಲಕ ಆ ಪಾತ್ರಕ್ಕೆ ನ್ಯಾಯ ಒದಗಿಸುವ ಪ್ರಯತ್ನವನ್ನು ಆಧುನಿಕ ಕನ್ನಡ ಸಾಹಿತ್ಯ ದಲ್ಲಿ ಕಾಣುತ್ತೇವೆ. ನಾಟಕ ಪ್ರಕಾರದಲ್ಲಿಯೂ ಈ ಪ್ರಯತ್ನ ದೊಡ್ಡ ಪ್ರಮಾಣದಲ್ಲಿಯೇ ನಡೆದಿದೆ. ಅದರಲ್ಲಿಯೂ ನಾಟಕಕಾರ್ತಿಯರು ಪುರಾಣಕ್ಕೆ ಮುಖಾಮುಖಿಯಾದದ್ದು ಹೆಚ್ಚು ಕುತೂಹಲವನ್ನುಂಟು ಮಾಡುತ್ತದೆ. ಏಕೆಂದರೆ, ಭಾರತೀಯ ಪುರಾಣಗಳನ್ನು ಕಡೆದಷ್ಟು ಹೆಣ್ಣಿನ ನೋವು ಮಡುಗಟ್ಟುತ್ತದೆ. ಪುರಾಣ ಪ್ರಪಂಚದಲ್ಲಿ ಶೋಷಣೆಗೆ ಒಳಗಾದವರು, ಪುರುಷರ ಪ್ರತಿಷ್ಠೆಗೆ ತಮ್ಮ ಬದುಕನ್ನೇ ಕಳೆದುಕೊಂಡವರು ಹಲವರು. ಅದರಲ್ಲಿ ‘ಮಾಧವಿ’ ಪಾತ್ರವೂ ಒಂದು.

ಪುರಾಣದ ಪ್ರಕಾರ ಮಾಧವಿ ಯಯಾತಿಯ ಮಗಳು. ಸೌಂದರ್ಯದ ಖನಿಯಾದ ಮಾಧವಿಗೆ ಕನ್ಯತ್ವ (ಪ್ರಸವದ ನಂತರವೂ ಕನ್ಯೆಯಾಗಿಯೇ ಇರುವಂತಹದು) ಮತ್ತು ಆಕೆಗೆ ಜನಿಸಿದವರು ಚಕ್ರವರ್ತಿಗಳಾಗುತ್ತಾರೆ ಎಂಬ ವರವಿದೆ. ಇಂತಹ ವರ ಪಡೆದ ಮಾಧವಿ ವಿಶ್ವಾಮಿತ್ರನ ಶಿಷ್ಯ ‘ಗಾಲವ’ನ ಗುರುದಕ್ಷಿಣೆಯ (ಮೈಯೆಲ್ಲಾ ಕಪ್ಪು, ಒಂದು ಕಿವಿ ಬಿಳಿಯಾಗಿರುವ ೮೦೦ ಕುದುರೆಗಳು) ಹಠಕ್ಕೆ ಬಲಿಯಾಗುತ್ತಾಳೆ. ವಿಶ್ವಾಮಿತ್ರನಿಗೆ ಗುರುದಕ್ಷಿಣೆಯಾಗಿ ನೀಡಬೇಕಾದ ೮೦೦ ಕುದುರೆಗಳಿಗಾಗಿ ಮಾಧವಿ ಹರ್ಯಶ್ವ, ದೀವ್ರೋದಾಸ, ಉಶೀನರ ಮತ್ತು ವಿಶ್ವಾಮಿತ್ರನಿಗೆ ವಸ್ತುವಿನಂತೆ ವಿಕ್ರಯವಾಗುತ್ತಾಳೆ.

ಈ ಪಾತ್ರವನ್ನು ವಸ್ತುವಾಗಿ ಮಾಡಿಕೊಂಡು ಮೂವರು ಆಧುನಿಕ ನಾಟಕಕಾರ್ತಿಯರು ನಾಟಕಗಳನ್ನು ರಚಿಸಿದ್ದಾರೆ. ಅವರುಗಳೆಂದರೆ, ಕನ್ನಡದ ಪ್ರಥಮ ನಾಟಕಕಾರ್ತಿ ತಿರುಮಲಾಂಬ – ವಿವೇಕೋದಯ (೧೯೨೨), ಲೀಲಾವತಿ ರಾಮಕೃಷ್ಣ – ನಿತ್ಯಕನ್ಯೆ, (೨೦೦೩) ಜಯಶ್ರೀ ಸಿ. ಕಂಬಾರ – ಮಾಧವಿ (೨೦೧೩) ಎಂಬ ನಾಟಕಗಳನ್ನು ರಚಿಸಿದ್ದಾರೆ. ಪ್ರಸ್ತುತ ಈ ಲೇಖನ ಈ ಮೂರು ನಾಟಕಗಳಲ್ಲಿ ಮಾಧವಿ ಪಾತ್ರದ ಚಿತ್ರಣ, ಪ್ರೋಷಣೆಯ ಸ್ವರೂಪವನ್ನು ವಿಶ್ಲೇಷಣೆ ಮಾಡುತ್ತದೆ. ಇಲ್ಲಿ ನಾಟಕ ಕಾರ್ತಿಯರು ವಿಭಿನ್ನ ಕಾಲ ಘಟ್ಟಗಳಲ್ಲಿ ನಾಟಕಗಳನ್ನು ರಚಿಸಿದ್ದಾರೆ. ಹೀಗಾಗಿ ವಿಭಿನ್ನ ಕಾಲ ಧರ್ಮದ ಪ್ರಭಾವ ಮಾಧವಿ ಪಾತ್ರ ಚಿತ್ರಣದಲ್ಲಿ ಕಾಣಬಹುದು.

ತಿರುಮಲಾಂಬರ ‘ವಿವೇಕೋದಯ’ ನಾಟಕ, ಶೀರ್ಷಿಕೆಯೇ ಸೂಚಿಸುವಂತೆ ವಿವೇಕದ ಉದಯ ಇಲ್ಲಿ ಕೇಂದ್ರ ವಸ್ತು. ಈ ಅರಿವಿಗೆ ದಾಳವಾಗುವವಳು ಮಾತ್ರ ‘ಮಾಧವಿ’. ನಾಟಕಕಾರ್ತಿ ಮಾಧವಿಯ ವೇದನೆಗೆ ಮೌನತಾಳಿ ವಿಶ್ವಾಮಿತ್ರ–ಗಾಲವರಿಗೆ ವಿವೇಕವನ್ನು ಮೂಡಿಸ್ವುಅ ನೆಲೆಗೆ ಆದ್ಯತೆ ನೀಡುತ್ತಾರೆ. ಹೆಣ್ಣಿನ ಶೋಷಣೆಗಿಂತ ಹಠ, ಅಭಿಮಾನ, ಅಹಂಕಾರಗಳಿಂದಾಗುವ ದುಷ್ಪರಿಣಾಗಳನ್ನು ತಿಳಿಸುವುದು ನಾಟಕದ ಮುಖ್ಯ ಆಶಯವಾಗಿ ಕಂಡುಬರುತ್ತದೆ.

‘ನೀಡಿ ಎಂದು ಬಂದವರಿಗೆ ಇಲ್ಲ’ ಎನ್ನಲಾರದ ಯಯಾತಿ ಮಹಾರಾಜ ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ನಿರ್ಲಿಪ್ತನಾಗಿ ‘ಮಾಧವಿ’ಯನ್ನು ‘ಯಜ್ಞಾಶ್ವ ಇರುವವರ ಬಳಿಯಲ್ಲಿ ಒಂದೊಂದು ವರ್ಷ ನ್ಯಾಸವಾಗಿಟ್ಟು ನಿನ್ನಿಚ್ಛೆ ಪೂರೈಸಿಕೋ’ ಎಂದು ದಾನವಾಗಿ ಕೊಡುತ್ತಾನೆ. ಈ ಸಂದರ್ಭದಲ್ಲಿ ಮಾಧವಿ, ‘ಮನಸ್ಸಿಗೆ ಒಪ್ಪದ ಕೆಲಸ ಸ್ವಲ್ಪ ಹಿಂತೆಗೆಯುವೆನು’ ಎಂದು ಸೌಮ್ಯವಾಗಿ ತನ್ನ ಅಭಿಪ್ರಾಯ ಮಂಡಿಸಿದಾಗ, ಈಕೆಯ ಅಭಿಪ್ರಾಯವನ್ನು ಮನ್ನಿಸದೇ ಯಯಾತಿ ಧರ್ಮಹಾನಿಯ ಪಾಠ ಮಾಡುತ್ತಾನೆ. ‘ಪಿತೃವಾಕ್ಯ ಪರಿಪಾಲನೆಯೇ ಪ್ರಧಾನವಾದುದೆಂದು ತಿಳಿದು ಸಮ್ಮತಿಸು, ಯಾಚಕರನ್ನು ನಿರಾಶೆಗೊಳಿಸಿದ ವಚನ ಭ್ರಷ್ಠತೆಯ ಪಾಪ, ಗುರುದಕ್ಷಿಣೆ ಸಲ್ಲಿಸಲಾರದೆ ಆತ್ಮಾಘಾತ ಮಾಡಿಕೊಳ್ಳುವ ಗಾಲವನ ಪಾಪ, ಪಿತೃವಾಕ್ಯ ಪರಿಪಾಲನೆ ಮಾಡದೇ ಹೋದ ಪಾಪ, ಈ ಎಲ್ಲಾ ಅನರ್ಥಗಳಿಗೂ ನೀನೇ ಕಾರಣವಾಗುತ್ತೀಯಾ ಎಂಬ ಬೆದರಿಕೆಯ ತಂತ್ರಕ್ಕೆ ಮಣಿದು ಮಾಧವಿ ಮೌನವಾಗಿ ಗಾಲವನನ್ನು ಹಿಂಬಾಲಿಸುತ್ತಾಳೆ. ಇಲ್ಲಿ ಹೆಣ್ಣಿನ ಅಂತರಂಗದ ಧ್ವನಿಗಿಂತ ಧರ್ಮದ ಧ್ವನಿ ಮೇಲುಗೈ ಸಾಧಿಸಿದೆ. ತಂದೆಯ ಮಾತಿಗೆ ಕಟ್ಟುಬಿದ್ದು, ನಾಲ್ವರು ಅರಸರ ಬಳಿ ಕ್ರಮವಾಗಿ ಒಂದೊಂದು ವರ್ಷ ಸಂಸಾರ ನಡೆಸಿ, ನಾಲ್ಕು ಮಕ್ಕಳನ್ನು ಪಡೆದ

ಮಾಧವಿ, ಗಾಲವನ ಬೇಡಿಕೆಯನ್ನು ಈಡೇರಿಸುತ್ತಾಳೆ.

ಆಕೆ ಅರಮನೆಗೆ ಹಿಂದಿರುಗಿದಾಗ ಯಯಾತಿ ಸಾವನ್ನಪ್ಪಿರುತ್ತಾನೆ. ಆ ಸಂದರ್ಭದಲ್ಲಿ ಮಾಧವಿಯ ನಿರ್ಧಾರ ಸನಾತನ ಮೌಲ್ಯವನ್ನು ಬೆಂಬಲಿಸುತ್ತದೆ.

> 'ಪಿತನಿಂ ಬಾಲ್ಯದಿಂ, ಮತ್ತಾ
> ಪತಿಯಿಂ ಯೌವನದಿ, ಪುತ್ರನಿಂ ವಾರ್ಧಕದೊಳ್
> ಸತಿ ಪರಿಪಾಲತೆಯಲ್ಲಿದೆ
> ಸ್ವತಂತ್ರದಿಂದಿರೆ ನಿಷೇಧಮೆಂಬರ್ ವಿಭುದರ್'

ಎಂದು ತಂದೆ ಇಲ್ಲದ ತವರನ್ನು ತೊರೆದು ತಪಸ್ಸಿಗಾಗಿ ಕಾಡಿಗೆ ಹೊರಡುತ್ತಾಳೆ. ಇಲ್ಲಿ ಅವಳಾಡುವ ಮಾತುಗಳು ನಡೆದುಕೊಳ್ಳುವ ರೀತಿ, ಸನಾತನ ಮೌಲ್ಯಗಳನ್ನು ಒಪ್ಪಿ ಅನುಸರಿಸುವ ಪಾತ್ರವಾಗಿ ಚಿತ್ರಿತವಾಗಿದ್ದಾಳೆ. ಇಲ್ಲಿ ಪ್ರತಿಭಟನೆಗೆ ಹಲವು ಆಯಾಮಗಳಿದ್ದರೂ, ಪುರುಷ ಪ್ರಧಾನ ವ್ಯವಸ್ಥೆ ಬಯಸುವ 'ಮಾದರಿ ಬೊಂಬೆ'ಯಂತೆ ಮಾಧವಿ ಚಿತ್ರಿತವಾಗಿರುವುದು ನಾಟಕಕಾರ್ತಿಯ ಮನೋಧರ್ಮಕ್ಕಿಂತ ಅಂದಿನ ಸಾಮಾಜಿಕ ಕಟ್ಟಳೆಗಳ ಪ್ರಭಾವ ಎನ್ನಬಹುದು. ಇಲ್ಲಿ ಮಾಧವಿ ಪೋಷಕ ಪಾತ್ರವಾಗಿರುವುದರಿಂದ, ಪೋಷಕ ಪಾತ್ರದ ಶೋಷಣೆಯನ್ನು ಗಂಭೀರವಾಗಿ ಪರಿಗಣಿಸುವ ಪ್ರಯತ್ನ ಕಾಣುವುದಿಲ್ಲ.

ಲೀಲಾವತಿ ರಾಮಕೃಷ್ಣ ರಚಿಸಿರುವ 'ನಿತ್ಯಕನ್ಯೆ' ನಾಟಕದ ಮಾಧವಿ ತಂದೆ–ತಾಯಿಯ ವಾತ್ಸಲ್ಯ ಕಾಣದೆ ಬೆಳೆದವಳು. ಈ ಭಾವವನ್ನು ಪ್ರಕೃತಿಯ ತಾಯಿ–ಮರಿ ಹಕ್ಕಿಗಳ ವಾತ್ಸಲ್ಯವನ್ನು ಕಂಡು ಅನುಭವಿಸಿರುವವಳು. ಯೌವನದಲ್ಲಿರುವ ಈ ಹೆಣ್ಣಿಗೆ ತನ್ನ ಭವಿಷ್ಯದ ಬಗ್ಗೆ ಸ್ಪಷ್ಟ, ಸುಂದರ ಕನಸುಗಳಿವೆ. ನಿಸ್ವಾರ್ಥ ಪ್ರೇಮಕ್ಕಾಗಿ ಹಂಬಲಿಸುವ ಮಾಧವಿಗೆ ಅನ್ಯೋನ್ಯವಾಗಿ ಸಂಗಾತಿಯೊಂದಿಗೆ ಬಾಳುವ, ಮಡಿಲಲ್ಲಿ ಮಕ್ಕಳನ್ನು ಬೆಳೆಸುವ ಆಸೆಯಿದೆ. ಆಡಂಬರದ ಭೋಗ ಜೀವನ ಆಕೆಗೆ ಸಾಕಾಗಿದೆ. ಪ್ರೀತಿಗಾಗಿ, ಪೂರ್ಣ ಬದುಕಿಗಾಗಿ ರಾಜಕುಮಾರಿ ಪಟ್ಟವನ್ನು ತ್ಯಜಿಸಿ 'ಸಾಮಾನ್ಯ'ಳಾಗಲು ಸಿದ್ಧಳಿದ್ದಾಳೆ. ಆದರೆ, ಗಾಲವನ ಪ್ರವೇಶದೊಂದಿಗೆ ಮಾಧವಿಯ ಕನಸು ನುಚ್ಚುನೂರಾಗುತ್ತದೆ. ಮೈಯೆಲ್ಲಾ ಕಪ್ಪು, ಕಿವಿ ಬಿಳಿಯಾಗಿರುವ ಕುದುರೆಯನ್ನು ಬೇಡಿದ ಗಾಲವನನ್ನು ಬರಿಗೈಯಲ್ಲಿ ಕಳುಹಿಸಿದರೆ ವಂಶದ ಘನತೆಗೆ ಕುಂದು ಎಂದು ಭಾವಿಸುವ ಯಯಾತಿ ಗಾಲವನ ಇಚ್ಛೆಯಂತೆ ನಿರ್ಲಿಪ್ತನಾಗಿ ಮಾಧವಿಯನ್ನು ದಾನ ಮಾಡುತ್ತಾನೆ. ಮಗಳ ಭಾವನೆಗಳಿಗೆ ಸ್ಪಂದಿಸದೆ, 'ಮಾಧವಿಯ ಬದುಕು ವಿಧಿಯಂತೆ' ಎಂದು ಕೈಚೆಲ್ಲುವ ಬೇಜವಾಬ್ದಾರಿ ತಂದೆಯಾಗಿ ಯಯಾತಿ ಕಾಣುತ್ತಾನೆ. ವಿಷಯ ತಿಳಿದ ಮಾಧವಿಯ ಪ್ರತಿಕ್ರಿಯೆ 'ದಾನ! ನಾನೇನು ಪಶುವೇ? ಎಂಬ ಆಶ್ಚರ್ಯ, ಅರಮನೆಯಿಂದ ತಪ್ಪಿಸಿಕೊಳ್ಳಲು ಸಖಿಯರು ನೀಡಿದ ಸಲಹೆಯನ್ನು ತಿರಸ್ಕರಿಸುತ್ತಾಳೆ. 'ಬೆಂಕಿಯಲ್ಲಿಯೂ ಅರಳುವೆನು' ಎಂಬ ಆತ್ಮವಿಶ್ವಾಸದಲ್ಲಿ ತನ್ನ ನೋವನ್ನು, ನಿರಾಶೆಯನ್ನು ಮುಚ್ಚಿಡಲು ಪ್ರಯತ್ನಿಸುತ್ತಾಳೆ. ಹೆಣ್ಣಿನ ಶೋಷಣೆಯ ಮೂಲ ಹುಡುಕುವ ಪ್ರಯತ್ನದಲ್ಲಿ ಮಾಧವಿಯ ಮಾತುಗಳು ಗಮನಾರ್ಹ–

> 'ಈ ಪರಾವಲಂಬ ಜೀವನ ಹೆಣ್ಣಿಗೊಂದು ಶಾಪ
> ಆಶ್ರಯದಾತ ಉದಾರ ಗುಣದವನಾದರೆ ಆಶ್ರಿತಳು ಸುಖಿ
> ಹಾಗಿಲ್ಲವಾದರೆ, ಆಕೆಯ ಬಾಳು ನರಕ ಸದೃಶ'

ಎಂಬ ಈ ಸಾಲುಗಳು, ಸ್ತ್ರೀ ಶೋಷಣೆಗೆ ಪರಿಹಾರ ಆಕೆಯ ಸಬಲೀಕರಣ, ಸ್ವತಂತ್ರ ಮನೋಭಾವದಿಂದ ಮಾತ್ರ ಸಾಧ್ಯ ಎಂಬ ಧ್ವನಿಯಿದೆ.

ಗಾಲವ ತನ್ನನ್ನು ಕುದುರೆಗಳಿಗಾಗಿ ಹಲವು ರಾಜರುಗಳಿಗೆ ಒತ್ತೆ ಇಡುತ್ತಾನೆ ಎಂದು ತಿಳಿದಾಗ, 'ನನಗೆ ಒಬ್ಬ ಸಾಮಾನ್ಯ ವೇಶ್ಯೆಗಿರುವ ಸ್ವಾತಂತ್ರ್ಯವೂ ಕೂಡ ಸಿಗಲಾರದು' ಎಂಬ ಆಕೆಯ ಹತಾಶೆ ಯಯಾತಿಯ ಮನಸ್ಸನ್ನು ಕರಗಿಸುವುದಿಲ್ಲ. ಆತನ ದೃಷ್ಟಿಯಲ್ಲಿ ಆಕೆ ಒಂದು 'ಸ್ವತ್ತು'. ಗಾಲವನೊಂದಿಗೆ ಮಾಧವಿಯನ್ನು ಕಳುಹಿಸುವ ಸಂದರ್ಭದಲ್ಲಿ ಯಯಾತಿಯ ಬಾಯಿಂದ 'ಕ್ಷಮಿಸಿಬಿಡು' ಎಂಬ ಯಾಂತ್ರಿಕ ಮಾತು ಬಂದಾಗ, 'ನೀವು ನಿಜವಾಗಿಯೂ ನನ್ನ ತಂದೆಯೇ?" ಎನ್ನುವ ಮೂಲಕ ಅವಳ ಆಕ್ರೋಶ ಸ್ಫೋಟಗೊಳ್ಳುತ್ತದೆ. ಅನ್ಯಾಯದಿಂದ ಪಾರಾಗಲೂ ಸಾಧ್ಯವಿಲ್ಲದಿದ್ದರೂ ತಂದೆಯ ಅನ್ಯಾಯವನ್ನು ಎತ್ತಿ ತೋರಿಸುತ್ತಾಳೆ. ತಂದೆಯಾಗಿ ಮಗಳಿಗೆ ವಾತ್ಸಲ್ಯದಿಂದ ವಂಚಿಸಿದ್ದೂ ಅಲ್ಲದೇ, ಆಕೆಯ ಕನಸನ್ನು ಕತ್ತರಿಸುವ ಕ್ರೂರಿಯಾದದ್ದು ಮಾಧವಿಯ ಅಸಹನೆಗೆ ಕಾರಣವಾಗುತ್ತದೆ. 'ವಂಶಗೌರವ'ದ ಹೆಸರಿನಲ್ಲಿ ಮಗಳನ್ನೇ ದಾನ ಮಾಡಿದ ತಂದೆಯನ್ನು ಮಾಧವಿ ಆಕ್ರೋಶದಿಂದ –

> 'ಹೆಣ್ಣಾದ ನಾನು ಯೌವನಭರಿತ ದೇಹದಲ್ಲಿ
> ಮುಪ್ಪಿನ ನಿರ್ಲಿಪ್ತತೆಯನ್ನು ಹೇಗೆ
> ಭರಿಸಬೇಕಾಗಿದೆಯೋ ಹಾಗೆಯೇ ಗಂಡಸಾದ ನೀವು
> ಮುಪ್ಪಾದ ಶರೀರದೊಳಗೆ ಪ್ರಾಯದ ಮನಸನ್ನು
> ಭರಿಸುವಂತರಾಗಿ' ಎಂದು ಶಪಿಸುತ್ತಾಳೆ.

ಹೀಗೆ ಲೀಲಾವತಿ ರಾಮಕೃಷ್ಣರ 'ಮಾಧವಿ' ಸಾಂಪ್ರದಾಯಿಕ ಮೌಲ್ಯಗಳನ್ನು ವಿರೋಧಿಸುತ್ತಾಳೆ. ಶೋಷಣೆಯಿಂದ ಪಾರಾಗಲು ಸಾಧ್ಯವಿಲ್ಲದಿದ್ದರೂ ತಂದೆಯನ್ನು ಪ್ರಶ್ನಿಸುವ, ಆತನ ತಪ್ಪಿಗೆ ಶಿಕ್ಷೆ ನೀಡುವ ಮನೋಧರ್ಮದವಳು. ಶಾಪ ನೀಡುವಿಕೆ ಆಕೆಯ ಅಮೂರ್ತ ವೇದನೆಯ ಸ್ಫೋಟ ಎಂಬಂತೆ ಚಿತ್ರಿತವಾಗಿದೆ.

ಜಯಶ್ರೀ ಸಿ. ಕಂಬಾರ ಅವರ 'ಮಾಧವಿ'ಗೆ ಭವಿಷ್ಯದ ಮದುವೆ, ವರನ ಬಗ್ಗೆ ಸುಂದರ ಕಲ್ಪನೆಯಿದೆ. ಇಂದ್ರನನ್ನು ನಾಚಿಸುವ ವರನೊಂದಿಗೆ ಸ್ವರ್ಗದಲ್ಲಿ ನಡೆಯುವಂತಹ ಅದ್ಧೂರಿ ವಿವಾಹದ ಕನಸು ಮಾಧವಿಯದು. ಈ ಕನಸಿಗೆ ಪೂರಕವಾಗಿ ತಂದೆ ಯಯಾತಿ ಮಗಳ ಬಗ್ಗೆ ಕಾಳಜಿಯುಳ್ಳವನು. ಆಕೆಯ ಸ್ವಯಂವರ ಏರ್ಪಡಿಸುವ ಸಿದ್ಧತೆಯಲ್ಲಿರುತ್ತಾನೆ. ಆದರೆ ಗಾಲವನ ಹಠ, ೨ನೇ ಪತ್ನಿ ದೇವಯಾನಿಯ ಒತ್ತಡದಲ್ಲಿ ಅಸಹಾಯಕನಾಗುತ್ತಾನೆ. 'ಈ ಮುಗ್ಧ ಹಸುಳೆಯನ್ನು ನೋಡಿ ದಯೆ ತೋರಿ ಸ್ವಾಮಿ' ಎಂಬ ಅವನ ಆಕ್ರಂದನ ಮನ ತಟ್ಟುತ್ತದೆ. ಮಲತಾಯಿ ದೇವಯಾನಿಗೆ 'ಮಾಧವಿ'ಯ ಬಗ್ಗೆ ಕರುಣೆಯಿಲ್ಲ. ಹೀಗಾಗಿಯೇ ಗಾಲವ ಮಾಧವಿ ಇಲ್ಲವಾದರೆ 'ರಾಜ್ಯ' ಬೇಕು ಎಂದಾಗ, ದೇವಯಾನಿ ರಾಜ್ಯದ ಮೇಲೆ 'ನನ್ನ ಗಂಡು ಮಕ್ಕಳ ಹಕ್ಕು ಸ್ಥಾಪಿತವಾಗಿದೆ'ಎಂದು ನಿರಾಕರಿಸಿ, 'ಮಾಧವಿ' ದಾನವೇ ಸೂಕ್ತ ಎಂದು ನಿರ್ಧರಿಸುತ್ತಾಳೆ. 'ಮಗಳೂ ಮತ್ತೆ ಸಿಗಲಾರಳು, ಮತ್ತೆ ಗಳಿಸಲು ಆಕೆಯೇನು ದ್ರವ್ಯವಲ್ಲ' ಎಂಬ ಯಯಾತಿಯ ಧೋರಣೆ ದೇವಯಾನಿಯ ನಿರ್ಧಾರವನ್ನು ಕದಲಿಸುವುದಿಲ್ಲ. ಬದಲಿಗೆ ರಾಜನ ಪರವಾಗಿ 'ಮಾಧವಿ'ಯನ್ನು ಗಾಲವನಿಗೆ ದಾನ ಮಾಡುತ್ತಾಳೆ.

ಗಾಲವನೊಂದಿಗೆ ಹರ್ಯಶ್ವನ ಅರಮನೆ ಸೇರಿದ ಮಾಧವಿಗೆ ಮದುವೆಯ ಕನಸು ಬತ್ತಿರುವುದಿಲ್ಲ. ಪರಿಪಾಲಿಕೆಯರು ಸಿಂಗಾರ ಮಾಡಿದಾಗ ಯುವರಾಜನೊಂದಿಗೆ ವಿವಾಹ ಎಂದೇ ಭಾವಿಸುವ ಮುಗ್ಧೆ. ಪರಿಚಾರಿಕೆಯರು ಹರ್ಯಶ್ವ ಮುದಿರಾಜನೊಂದಿಗೆ ವಿವಾಹವಿಲ್ಲದ ದಾಂಪತ್ಯ ನಿನ್ನದು ಎಂದಾಗ ಆಘಾತಗೊಂಡು ಚೀರುತ್ತಾಳೆ. ಕ್ರಮೇಣ ಇದೇ ವಿಧಿಯಾಗಿದ್ದರೆ ಇನ್ನೇನು ಎಂದು ರಾಜಿಯಾಗಿ ಹರ್ಯಶ್ವನ ಮಗನಿಗೆ ತಾಯಿಯಾಗುತ್ತಾಳೆ. ತಾಯ್ತನದಲ್ಲಿ ಸಂತೃಪ್ತಿಯಾಗಿದ್ದ ಮಾಧವಿಗೆ ಗಾಲವನ ಆಗಮನ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ಹರ್ಯಶ್ವನನ್ನೇ ಪತಿ ಎಂದು ಭಾವಿಸಿ ಬದುಕುತ್ತಿದ್ದ ಮಾಧವಿಗೆ ಇದು ಕೇವಲ ವರ್ಷದ ಕರಾರು ಎಂದಾಗ, ಕಂದನನ್ನು ತೊರೆಯುವ ಇಚ್ಛೆಯಿಲ್ಲದೇ, 'ನಾನು ಇಲ್ಲೇ ಇದ್ದು ಬಿಡುವೆ' ಎಂದು ರಾಜನನ್ನು ಬೇಡುತ್ತಾಳೆ, ಅದಕ್ಕೆ ಅವಕಾಶವಿಲ್ಲ ಎಂದರಿತ ಮಾಧವಿ ಕಂದನನ್ನು ಬಿಟ್ಟಿರಲಾರದೆ 'ಇವರೆಲ್ಲರ ಮನಸ್ಸು ಕರಗುವಂಥ ಹಾಡು ಹೇಳಿ

ಕವಿಗಳೇ ಕವಿಗಳೇ' ಎಂಬ ಆಕೆಯ ಆರ್ತನಾದ 'ಗಾಲವ'ನನ್ನು ಕರಗಿಸುವುದಿಲ್ಲ. ಅಲ್ಲಿಂದ ದೀವೋದಾಸನ ಅರಮನೆ ಸೇರುವ ಹೊತ್ತಿಗೆ ದಾನ–ಒತ್ತೆಗಳ ನಡುವೆ ನಲುಗಿದ ಮಾಧವಿ ಮನಸ್ಸು ನೋವಿನಿಂದ ಪಕ್ವಗೊಂಡಿದೆ. ದಿವೋದಾಸ ಆಕೆಯನ್ನು ವಿವಾಹವಾಗಿ, ಪ್ರಾಮಾಣಿಕವಾಗಿ ಆಕೆಯನ್ನು ಪ್ರೀತಿಸುತ್ತಿದ್ದರೂ, ಯಾವ ಸ್ಪರ್ಷದಿಂದಲೂ ಪುಳಕಗೊಳ್ಳಲಾರದ ಸ್ಥಿತಿ ಮಾಧವಿಯದು. ದಿವೋದಾಸನ ಮಗು ಮಡಿಲಲ್ಲಿದ್ದರೆ ಹಿಂದೆ ತಾನು ಹೆತ್ತ ಮಕ್ಕಳನ್ನು ನೆನೆಯುತ್ತಾಳೆ.

> 'ಇವನಿಗಿಂತ ದೊಡ್ಡವ ಈಗ ನಡೆಯತೊಡಗಿರಬಹುದು,
> ಅವನಿಗಿಂತ ದೊಡ್ಡವ ಮಾತನಾಡುತ್ತಿರಬಹುದು
> . . . . . ಮತ್ತಿನ್ನಾರನ್ನೋ ಅಮ್ಮ ಎಂದು ಕರೆಯುತ್ತಿರಬಹುದೇ?

ಎಂಬ ಮಾಧವಿಯ ಕನವರಿಕೆಯಲ್ಲಿ ಆಕೆಯ 'ತಾಯ್ತನ' ವಾತ್ಸಲ್ಯ ಭಾವವನ್ನು ಗುರ್ತಿಸಬಹುದು. ಹೀಗೆ ತಾಯಿಯಾಗಿಯೂ ಮಕ್ಕಳ ಸಾಂಗತ್ಯವಿಲ್ಲದ ಮಾಧವಿಯ ಸಂಕಟ ತೀವ್ರಗೊಂಡು ಸಹನೆಯ ಕಟ್ಟೆ ಒಡೆಯುತ್ತದೆ. ಇದು ಗಾಲವ–ಮಾಧವಿಯ ಸಂವಾದದ ದೃಶ್ಯದಲ್ಲಿ ಕಂಡುಬರುತ್ತದೆ. ಗಾಲವನನ್ನು 'ಋಷಿ' ಎಂಬ ಪ್ರಭಾವಳಿಯಿಂದ ಮುಕ್ತಗೊಳಿಸಿ ಅವನನ್ನು ಹಣದಾಹದ ಒಂದು ಪಿಶಾಚಿ ಎಂದು ಜರಿಯಲು ಹಿಂಜರಿಯುವುದಿಲ್ಲ. ಅವನ ಬಾಯಿಂದ 'ತಾಯಿ' ಎನ್ನುವ ಮಾತು ಅಸಹ್ಯ ಹುಟ್ಟಿಸುತ್ತದೆ. ನಿನಗೆ ತಾಯಿ ಎನ್ನುವ ಶಬ್ಧದ ಅರ್ಥ ಗೊತ್ತಿದೆಯೇ? ನಿನ್ನ ಶಾಸ್ತ್ರ ಮಂತ್ರಗಳು ಅರ್ಥ ತಿಳಿಸಿಲ್ಲವೆ? ಎಂದು ಪಶ್ನಿಸುತ್ತಾ ಹೆಣ್ಣನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡು ಕ್ರೌರ್ಯವೆಸಗಿದ ಗಾಲವ ಆತ್ಮಾಭಿಮಾನವಿಲ್ಲದ ನಿರ್ಲಜ್ಜ, ಭಿಕ್ಷುಕ ಎಂದು ತೀರ್ಮಾನಿಸಿ, ಮುಂದಿನ ತನ್ನ ಬದುಕನ್ನು ಗಾಲವನ ಆಯ್ಕೆಗೆ ಬಿಡದೆ ತಾನೇ ಆಯ್ಕೆ ಮಾಡಿಕೊಳ್ಳುವ ನಿರ್ಧಾರದೊಂದಿಗೆ ನಾಟಕ ಸಮಾಪ್ತಿಯಾಗುತ್ತದೆ. ಸ್ತ್ರೀವಾದದ ಆಶಯದ ಧ್ವನಿಯನ್ನು ಈ ಮಾಧವಿಯಲ್ಲಿ ಗುರ್ತಿಸಬಹುದು.

ಹೀಗೆ ಮೂವರು ನಾಟಕಕಾರ್ತಿಯರ ಮಾಧವಿ ಆರಂಭದಲ್ಲಿ ಪಿತೃವಾಕ್ಯ ಪರಿಪಾಲಕಳಾಗಿ, ನಂತರ ತನಗಾದ ಅನ್ಯಾಯಕ್ಕೆ ಶಿಕ್ಷೆ ನೀಡುವ ದಿಟ್ಟೆಯಾಗಿ, ತನ್ನ ಬದುಕಿನ ಆಯ್ಕೆ ತನ್ನದೇ ಎಂದು ನಿರ್ಧರಿಸುವ ಪ್ರಬುದ್ಧೆಯಾಗಿ ಈ ನಾಟಕಗಳಲ್ಲಿ ಚಿತ್ರಿತವಾಗಿದ್ದಾಳೆ.

ಪರಾಮರ್ಶನ ಕೃತಿಗಳು


೧. ವಿವೇಕೋದಯ – ತಿರುಮಾಲಾಂಬ
೨. ತೆರೆ(ನಾಟಕ ಸಂಕಲನ) – ಲೀಲಾವತಿ ರಾಮಕೃಷ್ಣ
೩. ಮಾಧವಿ – ಜಯಶ್ರೀ ಸಿ.ಕಂಬಾರ
೪. ಪುರಾಣ ನಾಮ ಚುಡಾಮಣಿ – ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ